ಚಾಸ್ಟೀ ಆಡೋದು. ಕೊನೆಗೆ ನನ್ ಕಡಿಗೆ ಬಂದು ಚರ್ಚಾ ಮಾಡಿ ವಿಷಯ ತಿಳ್ಕೊಳೋದು. ನಾ ಸಲೀಂ ಆಲಿ ಪುಸ್ತಕ ತಿರುವಿ ತಿಳಿದಿದ್ದ ಹೇಳೋದು. ನಡುವೆ ಏನೇನೋ ಜೋಕ್ಸ್ ಹೇಳಿ ನಲಿಯೋದು ನಡೀತಾನೆ ಹೋತು. ಇದ್ಯಾವುದು ನಾವು ಮಾಡ್ಕೊಂಡ ಪಕ್ಕಾ ಪ್ಲಾನ್ ಆಗಿರಲಿಲ್ರಿ. ಹಂಗಂಗೆ ಹೊಂದಿಕೆಯಾಗಿ ನಮಗೆ ತಿಳೀದ ಹೊಸ ದಾರಿಯೊಂದು ಹುಟ್ಕೊಂಡೇ ನಡೆದೇ ಬಿಡ್ತು'

'ಸಾಲಿ ಕಲಿಸೋ ಮಾಸ್ತರ ಅಡಿವೀ ಹತ್ತಿಸ್ಯಾನಲ್ಲೋ! ಎಂದು ತಗಾದೆ ತೆಗೆದ ಪೋಷಕರು ಇದ್ರು. ಕಲಿಸೋಂದಂದ್ರ ನಾಲ್ಕು ಗೋಡಿ ಮಧ್ಯಾನೆ ಅದಾ! ಅಂತ ತಿಳಿದಿರೋ ಎಲ್ಲಾ ಪೇರೆಂಟ್ಸ್ ಹಿಂಗೆ ಅಲ್ವೇನ್ರಿ? ಈ ನಮೂನಿ ಯೋಚ್ನೆ ಮಾಡೋದು ತಪ್ಪು ಅಂತ ಹೇಳೋಕೂ ಆಗದು. ನಮ್ಮ ಕಲಿಕೆ ಪದ್ಧತೀನೆ ಹಂಗ ಅದ. ಮತ್ ಹಿಂಗ್ ದಿನಾ ಕಳೀತಾ ಕಳೀತಾ ಮಕ್ಕಳು ಹಕ್ಕಿಗಳ ಗುರುತು ಹಚ್ಚಿ ಹೆಸರು ಹೇಳೋ ಹಂಗಾದ್ರು. ಇದೊಂದು ಚಟ ನಮ್ಮ ದಿನದ ಚಟುವಟಿಕೆ ಅಗೋತು ನೋಡ್ರಿ. ದಿನಾ ಅವರಿಗೆ ಟಾಸ್ಕ್ ಕೊಡ್ತಿದ್ದೆ. ಹಕ್ಕಿ ಹೆಸರು, ಗಂಡು ಹೆಣ್ಣು ಗುರ್ತಿಸೋದು. ಅದರ ಬಣ್ಣ ಹಾರೋ ನಮೂನಿ. ಎಲ್ಲಾ ಕಲೆಕ್ಟ್ ಮಾಡಿ ಹೇಳೋದು. ಚಲೋ ಹೇಳಿ ಗೆದ್ದವನಿಗೆ ದಿನಾ ಪೆನ್ನು, ಪುಸ್ತಕ ಬಹುಮಾನ ಕೊಡೋದು. ಗೂಡು ಕಟ್ಟರೋ ಹಕ್ಕಿ ತನ್ನ ಮಕ್ಕಳು ಮರಿ ಸಾಕೋ ವಿಧಾನ ವಿವರಿಸಿ ಹೇಳೋದು. ಬರೀ ಇದೆ ನಮ್ಮ ಆಟ ಆಗೋಯ್ತು. ಹಕ್ಕಿಗಳ ದಿನಚರಿನ ದೂರ ನಿಂತು ನೋಡೋದು ಹೆಂಗಂತ ಮಕ್ಕಳು ಸಲೀಸಾಗಿ ಕಲಿತೇ ಬಿಟ್ರು ನೋಡ್ರಿ. ಮಕ್ಕಳ ಕಣ್ಣು ಮನಸ್ಸು ತುಂಬಾ ಸೂಕ್ಷ್ಮ. ಹಕ್ಕಿಗಳ ಬದುಕಿಗೆ ಕಿಂಚಿತ್ತೂ ತೊಂದ್ರಿ ಆಗದಂಗೆ ನಾವು ನಡ್ಕೊಳೋ ರೀತಿ ಗೊತ್ತಾದ್ ಮ್ಯಾಲ ಅವರೆದೆಯೊಳಗೆ ಪಕ್ಷಿಗಳು ರೆಕ್ಕೆಬಿಚ್ಚಿ ಕುಣಿದಾಡಿದವು. ಬಣ್ಣಹಚ್ಚಿ ಹಾರೋಡೋ ಹಂಗಾದ್ವು'.

'ಇದರ ನಡುವಿ ನಡೆದೇ ಹೋದ ಕೆಲ ರೋಚಕ ಕಥಿ ನಿಮಗೆ ಹೇಳ್ಬೇಕ್ರಿ. ಒಂದ್ಸಲ ಗೀಜಗನ ಗೂಡು ಮುರಿದು ಬಿದ್ದು ಹೋಗಿದ್ದು ಹುಡುಗರು ಬಂದು ಹೇಳಿದ್ರು. ನಾ ಹೋಗ ನೋಡ್ತಿನಿ ಮೇಕೆ ಕಾಯೋರು ಗಳ ಕುಡ್ಗೋಲು ಇಟ್ಟು ಎಳೆದ ಹೊಡೆತಕ್ಕ ಅದರ ರೆಂಬಿ ಮುರುದೋಗಿ ನೆಲಕ್ಕೆ ಬಿದ್ದಿತ್ತು. ನಮ್ ಹುಡುಗರು ಅದ ನೋಡಿ



ಅಳಾಕೆ ಶುರು ಮಾಡಿದ್ರು. ಅದರ ಮನಿ ಮೊದಲಿನಾಂಗೆ ಕಟ್ಟಿ ಕೊಡಿ ಸಾರ್ ಅಂದು ದುಂಬಾಲು ಬಿದ್ದವು. ಒಳಗ ನೋಡಿದ್ರ ಎರಡು ಮರಿ ಪಿಳಪಿಳ ಅಂತಿದ್ವು. ಬೈಂಡಿಂಗ್ ವೈಯರ್ ತಂದು ರಿಪೇರಿ ಮಾಡಿ ತಿರುಗ ಅಲ್ಲೇ ಹಚ್ಚಿ ಕಾದ್ವಿ. ಎಲ್ಲಿತ್ತೋ ತಾಯಿ ಹಾರಿ ಬಂದು ಗೂಡು ಸೇರಿ ಮಕ್ಕಳ ಸಂತೈಸಿದಳು. ಅವತ್ತು ಮಕ್ಕಳು ಅತ್ತಿದ್ದು ಕಂಡು ನನ ಮನಸ್ಸಿಗೆ ಭಾಳಾ ಕಳವಳನೂ ಆತು ಒಂಥರ ಅವರ ಕಾಳಜಿ ಕಂಡು ಸಂತೋಷಾನೂ ಆತ್ರಿ. ಮಕ್ಕಳ ಮನಸ್ಸು ಅದೆಷ್ಟು ನಿಷ್ಕಲ್ಮಶ ನೋಡ್ರಿ'.

ಮತ್ತೊಮ್ಮೆ ಸೂರಕ್ಕಿ (ಸನ್ ಬರ್ಡ್) ಅದರ ಗೂಡೂ ಕಿತ್ತೋಗಿತ್ತು. ನೋಡೋಣಂತ ಒಂದು ದಿವ್ಸ ಕಳೆದು ನೋಡಿದ್ರಾ ಮರಿ ಅನಾಥವಾಗಿ ಬಿದ್ದಿದ್ದವು. ಸೂರಕ್ಕಿ ಗೂಡು ಮತ್ತೆ ಸರಿ ಮಾಡೋದು ಅಷ್ಟು ಸಲೀಸಲ್ರಿ. ನಾವೇ ಒಂದು ಪುಟಾಣಿ ಬುಟ್ಟಿ ಮಾಡಿ ಅವನ್ನು